ಶ್ರೀ ಎಸ್. ಬಂಗಾರಪ್ಪ —(ಅ) ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ನೋಡಿದರೆ, ರಾಜ್ಯದಲ್ಲಿ ರತಕ್ಕ ಜಿಲ್ಲೆಗಳಲ್ಲಿ ಹೈಪವರ್ ರಿಗ್ಸ್ ಚೆನ್ನಾಗಿ ಕೆಲಸಮಾಡ ತಾ ಇಲ್ಲವೆಂಬ ಅಭಿಪ್ರಾಯ ಇದರಿಂದಲೇ ಗೊತಾಗುತ್ತದೆ. ಆದ್ದರಿಂದ ಬೇರೆ ಜಿಲ್ಲೆಗಳಿಗೆ ಅಂದರೆ ಅದರಲ್ಲಿ ಮಲೆನಾಡು ಜಿಲ್ಲೆಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೇ ಇರುವು ರಿಂದ ಕುಡಿಯುವ ನೀರಿನ ವ್ಯವಸ್ಥೆಗಾಗಿ ಶಿವಮೊಗ್ಗ ಮತ್ತು ಇತರ ಜಿಲ್ಲೆಗಳಿಗೆ ಯಾವಾಗ ಹೈಪವರ್ ರಿಗ್ಸನ್ನು ಕಳುಹಿಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಈಗಾಗಲೇ 7 ಜಿಲ್ಲೆಗಳಿಗೆ ಅವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಆ ಭಾಗಗಳಲ್ಲಿ ಬರಗಾಲ ಪರಿಸ್ಥಿತಿ ಬಹಳವಾಗಿದ್ದುದರಿಂದಲೇ ಆ ಜಿಲ್ಲೆಗಳಿಗೆ ಹೆಚ್ಚಿನ ರೀತಿಯಲ್ಲಿ ಕೊಟ್ಟಿದೆ.

ಶ್ರೀ ಕೆ. ಎಚ್. ಹನುಮೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ 594 ಬೋರ್‌ವೆಲ್‌ಗಳ ಪೈಕಿ 127 ಬೋರ್‌ವೆಲ್‌ಗಳು ಫೇಲ್ಯೂರ್ ಆಗಿವೆಯೆಂದು ಹೇಳಿದೆ. ಎಷ್ಟು ಗ್ಯಾಲನ್‌ಗಿಂತ ನೀರು ಕಡಿಮೆ ಬಂದರೆ ಫೇಲ್ಯೂರ್ ಎಂದು ಸರ್ಕಾರದ ಅಭಿಪ್ರಾಯ ? ಹೀಗೆ ಇಷ್ಟೊಂದು ಫೇಲ್ಯೂರ್ ಆಗಿರುವಾಗ, ಈಗ ಎಲೆಕ್ಟ್ರಾನಿಕ್ ಯೂನಿಟ್ಸ್ ಎಂಬುದಾಗಿ ಹೊಸ ಎಕ್ವಿಪ್‌ಮೆಂಟ್ಸ್ ಈ ರಾಜ್ಯಕ್ಕೆ ಬಂದಿವೆ. ಅವುಗಳನ್ನು ಪ್ರಯೋಗಮಾಡಿ ಸೇಕಡ 90 ಅಥವಾ 99ಷ್ಟು ಸಕ್ಸೆಸ್ ಮಾಡಬಹುದು. ದುರಾದೃಷ್ಟವಶಾತ್ ಈ ಯೂನಿಟ್‌ಗಳು ಎಲ್ಲವೆಯೋ ಗೊತ್ತಿಲ್ಲ. ಎಲೆಕ್ಟ್ರಾನಿಕ್ ಯೂನಿಟ್ಸ್ ಈ ರಾಜ್ಯಕ್ಕೆ ಎಷ್ಟು ಬಂದಿವೆ ? ಅವು ಎಲ್ಲೆಲ್ಲವೆ ? ಕುಡಿಯುವ ನೀರಿನ ಸರ್ಕಾರ್ಯಕ್ಕೆ ಅವನ್ನು ಈಗ ಕೊಡದೇ ಇರುವುದರಿಂದ ಇದುವರೆಗೆ ಸಾವಿರಾರು ರೂಪಾಯಿಗಳು ನಷ್ಟವಾಗುತ್ತಿದೆ. ಆದ್ದರಿಂದ ಕುಡಿಯುವ ನೀರಿನ ಸರ್ಕಾರ್ಯಕ್ಕೆ ಅದ್ಯತೆ ಕೊಡಲು ಈಗ ಎಲೆಕ್ಟ್ರಾನಿಕ್ ಯೂನಿಟ್ಸ್ ಎಷ್ಟೆಷ್ಟು ಇವೆಯೋ ಅವನ್ನು ಜಾಗ್ರತೆಯಾಗಿ ಕಳುಹಿಸಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಅವರ ಸಾಧ್ಯತೆ ಎಷ್ಟಿದೆ, ಏನಿದೆಯೆಂಬುದನ್ನು ಪರಿಶೀಲನೆ ಮಾಡಿ, ಈ ಸರ್ಕಾರ ಅದನ್ನು ಅದಕ್ಕಾಗಿಯೇ ಉಪಯೋಗಿಸುವುದಕ್ಕೆ ಇಟ್ಟುಕೊಂಡಿರುವುದರಿಂದ ಅದನ್ನು ಜಾಗ್ರತೆಯಾಗಿ ಕೊಡುತ್ತೇವೆ.

ELECTION TO NIPANI MUNICIPALITY

431. Sri B. B. SAYANAK (Belgaum).—

Will the Minister for Law and Municipal Administration be pleased to state :—

(*a*) the date on which the administration of the Nipani Municipality was taken over by the Government ;

(*b*) the date on which election to the Nipani Municipality would be conducted ?

Sri D. K. NAIKAR (Minister for Law and Municipal Administration).—

(*a*) 14th June 1965.

(*b*) Action is being taken to conduct the election of the Municipality as soon as possible.

Sri B. B. SAYANAK.—On 14th June 1965 Nippani Municipality was taken over by the Government. What was the reason for not holding election to Nipani Municipality from 1965 onwards ?

† **Sri D. K NAIKAR.**—When the election date was fixed in 1935, a writ petition was filed challenging the election and a stay order was issued. That was the reason for not holding the election there.

Sri B. B. SAYANAK,—The writ petition has already been decided by the High Court. Even then, why the Government has not taken steps to hold election ?

Sri D. K. NAIKAR.—I want notice for that.

ಶ್ರೀ ಕೋಣಂದೂರು ಲಿಂಗಪ್ಪ.—1965ನೇ ಇಸವಿಯಿಂದ ಇವತ್ತಿನವರೆಗೆ ಒಂದು ರಿಟ್‌ಪಿಟಿಷನ್ ಕೂಡ ಇತ್ಯರ್ಥವಾಗಿಲ್ಲವೆಂದು ಹೇಳಿದರೆ ನಮ್ಮ ಉಚ್ಚ ನ್ಯಾಯಾಲಯದ ಕಾರ್ಯದಕ್ಷತೆಯ ಬಗ್ಗೆ ಸರ್ಕಾರ ಏನು ಅಭಿಪ್ರಾಯ ಇಟ್ಟುಕೊಂಡಿದೆ ?

ಶ್ರೀ ಡಿ. ಕೆ. ನಾಯ್ಕರ್.—1965ರಲ್ಲಿ ರಿಟ್ ಪಿಟಿಷನ್ ಫೈಲ್ ಆದನಂತರ ಸ್ಟೇ ಆಯಿತು. ರಿಟ್ ಪಿಟಿಷನ್ ಡಿಸ್‌ಪೋಜ್ ಆದನಂತರ ಡ್ರಾಟ್ ಕಂಡಿಷನ್ ಬಂತು. 1973ರಲ್ಲಿ ಎಲೆಕ್ಷನ್ ಆಗಕೂಡದೆಂದು ಸರ್ಕಾರದಿಂದ ಆದೇಶ ಕೊಟ್ಟಿದೆ. ಈಗ ಎಲೆಕ್ಷನ್ ಆಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ರಿಟ್ ಪಿಟಿಷನ್ ತೀರ್ಮಾನವಾದ ಮೇಲೆ 1973ರ ವರೆಗೆ ಏಕೆ ಎಲೆಕ್ಷನ್ ಮಾಡಲಿಲ್ಲ ? 1968-69ರಲ್ಲಿ ತೀರ್ಮಾನವಾಗಿದ್ದರೂ 1973ವರೆಗೆ ಸರ್ಕಾರ ಆದೇಶ ಕೊಡುವವರೆಗೆ ಏಕೆ ನಿಧಾನಮಾಡಿದ್ದು ? ಕ್ಷಾಮ ಪರಿಸ್ಥಿತಿ ಹೋದ ಮೇಲೆ ಎಲೆಕ್ಷನ್ ಮಾಡುವುದಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ ?

ಶ್ರೀ ಡಿ. ಕೆ. ನಾಯ್ಕರ್.—ಎಲೆಕ್ಷನ್ ಮಾಡುವುದಕ್ಕೆ ಪ್ರಯತ್ನ ಪಟ್ಟು ಪುನಃ 1973ರಲ್ಲಿ ಎರೆ ನ್ ಡೇಟ್ ಫೀಕ್ಸ್ ಆಗಿತ್ತು. ಡ್ರಾಟ್ ಕಂಡೀಷನ್ ಬಂದಿದ್ದರಿಂದ ಎಲೆಕ್ಷನ್ ಪೋಸ್ಟ್ ಪೋನ್ ಆಯಿತು.

Sri B. B. SAYANAK —I would like to know from the Minister when the writ petition was d sposed of in the High Court and after the disposal of the writ petition why the Government did not hold election ?

Sri D. K. NAIKAR.—I have already said that information is not available now.

Sri B. B. SAYANAK.—When the High Court has decided that case, the Minister must have that information with him. When he does not know the date of the disposal of the writ petition why he should tell that there was drought and all that ?

Sri D. K. NAIKAR.—In respect of writ petition it is delt with in a separate file. So far as the election is concerned the file is with me. .But, I don't have that date.

Sri B. B. SAYANAK.—In protest against the Government's attitude not to hold the election in Nipani, I am staging a walk out.

(*The member withdrew*).